ಅಸಲು ದಾವಾ ಸಂಖ್ಯೆ -288/2015

ಡಿಡಬ್ಲ್ಯೂ - 02

ದಿನಾಂಕಃ 18-03-2019

ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲು - ಶ್ರೀ ಎನ್ ಎಸ್ ಪಿ ವಾದಿ ಪರ ವಕೀಲರಿಂದ.

ದಾವೆಯನ್ನು ಯಾವುದರ ಸಲುವಾಗಿ ದಾಖಲಿಸಿರುತ್ತಾರೆ ನನಗೆ ಗೊತ್ತಿರುವುದಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ತಯಾರಿಸಲು ನಾನೇ ಮಾಹಿತಿಯನ್ನು ಕೊಟ್ಟಿರುತ್ತೇನೆ ದಾವಾ ಆಸ್ತಿಗಳು ಎರಡು ಇರುತ್ತವೆ. ದಾವಾದ ಆಸ್ತಿಗಳ ಸರ್ವೆ ನಂಬರ ನನಗೆ ಹೇಳಲು ಬರುತ್ತದೆ. ಅವುಗಳ ಸರ್ವೆ ನಂಬರ 63 ಇರುತ್ತದೆ. ಪಹಣಿ ಪತ್ರಿಕೆಯನ್ನು ನಾನು ನೋಡಿರುತ್ತೇನೆ. ಒಂದು ಉತಾರ 1 ನೇ ಪ್ರತಿವಾದಿಯ ಹೆಸರಿನಲ್ಲಿರುತ್ತದೆ. 2 ನೇ ಉತಾರ 5 ನೇ ಪ್ರತಿವಾದಿಯ ಹೆಸರಿನಲ್ಲಿರುತ್ತದೆ. ವಾದಿಯು ಪ್ರತಿವಾದಿ ನಂ.1, 2, 3 ರವರ ಖಾಸ ಸಹೋದರಿ ಇರುತ್ತಾಳೆ ಅಂದರೆ ಸರಿ. 1 ನೇ ಪ್ರತಿವಾದಿಗೆ ಹೇಗೆ ಆಸ್ತಿ ಬಂದಿರುತ್ತದೆ ಅಂದರೆ ಸಾಕ್ಷಿಯು ಅವರ ತಂದೆ ಬಿಟ್ಟುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. 18 ರಿಂದ 20 ವರ್ಷಗಳ ಹಿಂದೆ 1 ನೇ ಪ್ರತಿವಾದಿಯ ತಂದೆಯವರು ಆತನಿಗೆ ಬಿಟ್ಟುಕೊಟ್ಟಿರುತ್ತಾರೆ. ಹಕ್ಕು ಬಿಟ್ಟು ಪತ್ರವನ್ನು ನಾನು ನೋಡಿರುವುದಿಲ್ಲ ಯಾವ ರೀತಿ ಬಿಟ್ಟು ಕೊಟ್ಟಿರುತ್ತಾರೆ ಎಂದು ನಿಮಗೆ ಗೊತ್ತಿರುವುದಿಲ್ಲ ಎಂದರೆ ಸಾಕ್ಷಿಯು ವಾರಸಾ ಪ್ರಕಾರ ಬಿಟ್ಟುಕೊಟ್ಟಿರುತ್ತಾರೆ.

ವಾದಿ ಹಾಗೂ ಪ್ರತಿವಾದಿ ನಂ.1 ರಿಂದ 4 ರ ಮಧ್ಯ ಪಾಲು ವಿಭಾಗ ಆಗಿರುತ್ತದೆ ಎಂದರೆ ಸಾಕ್ಷಿಯು ಮಾನ್ಯ ನ್ಯಾಯಾಲಯದಲ್ಲಿ ಡಿಕ್ರಿ ಆಗಿರುತ್ತದೆ ಎಂದು ನುಡಿಯುತ್ತಾರೆ 18 ರಿಂದ 20 ವರ್ಷಗಳ ಹಿಂದೆ ಡಿಕ್ರಿ ಆಗಿರುತ್ತದೆ ಪ್ರಕರಣದ ನಂಬರ ನನಗೆ ಗೊತ್ತಿರುವುದಿಲ್ಲ. ಡಿಕ್ರಿ ಆಗಿರುವ ವಿಷಯ ನನಗೆ ಸ್ವಂತಕ್ಕೆ ಗೊತ್ತಿರುತ್ತದೆ ವಾದಿ ಮತ್ತು 1 ರಿಂದ 4 ನೇ ಪ್ರತಿವಾದಿಯರ ಮನೆತನದ ಹಿರಿತನವನ್ನು ನಾನು ಮಾಡಿರುವುದಿಲ್ಲ ಅಂದರೆ ಸರಿ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಡಿಕ್ರಿ ಆಗಿರುತ್ತದೆ ಎಂದು ನಾನು ಬರೆಸಿರುವುದಿಲ್ಲ ಅಂದರೆ ಸರಿ . 1 ನೇ ಪ್ರತಿವಾದಿಯು 6 ನೇ ಪ್ರತಿವಾದಿಯ ಹೆಸರಿನಲ್ಲಿ ಹಕ್ಕು ಬಿಟ್ಟು ಪತ್ರ ಬರೆದು ಕೊಟ್ಟಿರುವ ಬಗ್ಗೆ ವಾದಿಗೆ ಗೊತ್ತಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. 10-12 ವರ್ಷಗಳ ಹಿಂದೆ 1 ನೇ ಪ್ರತಿವಾದಿಯು 6 ನೇ ಪ್ರತಿವಾದಿಯ ಹೆಸರಿನಲ್ಲಿ ಹಕ್ಕು ಬಿಟ್ಟು ಪತ್ರ ಬರೆದು ಕೊಟ್ಟಿರುತ್ತಾನೆ

ಶಿವಪ್ಪ ಜೀವಂತ ಇದ್ದ ಸಮಯದಲ್ಲಿ 1 ನೇ ಪ್ರತಿವಾದಿಗೆ 2 ಎಕರೆ 29 ಗುಂಟೆ ಜಮೀನನ್ನು ಬಿಟ್ಟುಕೊಟ್ಟಿರುತ್ತಾನೆ. 3 ಎಕರೆ 30 ಗುಂಟೆ ಜಮೀನನ್ನು ವಾದಿಗೆ ಹಾಗೂ ಪ್ರತಿವಾದಿ 2 ರಿಂದ 4 ರವರಿಗೆ ಬಿಟ್ಟುಕೊಟ್ಟಿರುತ್ತಾರೆ. 2 ರಿಂದ 4 ನೇ ಪ್ರತಿವಾದಿಯರಿಗೆ ಹಕ್ಕು ಬಿಟ್ಟು ಕೊಟ್ಟ ಬಗ್ಗೆ ಉತಾರವನ್ನು ನಾನು ನೋಡಿರುತ್ತೇನೆ. ವಾದಿ ಮತ್ತು ಪ್ರತಿವಾದಿಯರ ನಡುವೆ ಪಾಲು ವಿಭಾಗ ಆಗಿರುತ್ತದೆ. 18 ರಿಂದ 20 ವರ್ಷಗಳ ಹಿಂದೆ ಪಾಲು ವಿಭಾಗ ಆಗಿರುತ್ತದೆ. ಸಾಕ್ಷಿ ಮುಂದುವರೆದು ಪಾಲು ವಿಭಾಗ ಆಗಿರುವ ವಿಷಯ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. 5 ನೇ ಪ್ರತಿವಾದಿಯು ದಾವಾ ಆಸ್ತಿಯನ್ನು ವಾದಿ ಹಾಗೂ 2 ರಿಂದ 4 ನೇ ಪ್ರತಿವಾದಿಯರ ಕಡೆಯಿಂದ ಖರೀದಿಗೆ ಹಿಡಿದಿರುತ್ತಾರೆ. ಖರೀದಿ ಪತ್ರವನ್ನು ನಾನು ನೋಡಿರುವುದಿಲ್ಲ ಖರೀದಿ ಪತ್ರ ಮಾತುಕತೆಗೆ ನಾನು ಹೋಗಿರಲಿಲ್ಲ ಎಂದರೆ ಸರಿಯಲ್ಲ. ಖರೀದಿ ಪತ್ರ ಆದ ವಿಷಯ ವಾದಿಗೆ ಗೊತ್ತಿರುವುದಿಲ್ಲ ಎಂದರೆ ಸಾಕ್ಷಿಯು ಈ ವಿಷಯ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ವಾದಿ ಮತ್ತು ಪ್ರತಿವಾದಿಯರ ನಡುವೆ ಹಕ್ಕು ಬಟ್ಟ ಕೊಟ್ಟ ಪತ್ರ ಆಗಿರುವುದಿಲ್ಲ ಎಂದರೆ ಸರಿಯಲ್ಲ ವಾದಿ ಮತ್ತು ಪ್ರತಿವಾದಿಯರ ಮಧ್ಯೆ ಯಾವುದೇ ಪಾಲು ವಿಭಾಗ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಇವತ್ತಿಗೂ ಎಲ್ಲರೂ ಸಾಮೂಹಿಕವಾಗಿ ದಾವಾ ಆಸ್ತಿಗಳನ್ನು ಸಾಗು

ಮಾಡುತ್ತಿದ್ದಾರೆಂದರೆ ಸರಿಯಲ್ಲ. ವಾದಿಯ ಮನೆತನದ ಬಗ್ಗೆ ಯಾವುದೇ ವಿಷಯ ಗೊತ್ತರದೇ ಇದ್ದರೂ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ

ಮರು ವಿಚಾರಣೆ: ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂಡಾಧಿಕಾರಿಗಳು.ಸವಣೂರು.